ಡಿಸೆಂಬರ್ 30, 2019ರ ಮುಸ್ಸಂಜೆ. ಇಡೀ ಜಗತ್ತು ಕಳೆದ ವರ್ಷವನ್ನು ಬೀಳ್ಕೊಟ್ಟು, ಹೊಸ ವರ್ಷದ ಬರುವಿಕೆಯನ್ನು ಸಂಭ್ರಮಿಸಲು ಇರುವ ಇನ್ನೊಂದೇ ದಿನವನ್ನು ಎದುರು ನೋಡುತ್ತಿತ್ತು. ಆದರೆ ಚೀನಾದ ವುಹಾನ್‌ನಲ್ಲಿರುವ ವಿಶ್ವಪ್ರಸಿದ್ಧ 'ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ'ಯ ನಿರ್ದೇಶಕನ ಮುಖದಲ್ಲಿ ಮಾತ್ರ ಸಂಭ್ರಮದ ಲವಲೇಶವೂ ಇರಲಿಲ್ಲ. ಆ ಚೀನಿ ಕಣ್ಣುಗಳ ತುಂಬ ಆತಂಕದ ಛಾಯೆ ದಟ್ಟವಾಗಿತ್ತು. ಆತನೆದುರು, ವುಹಾನ್‌ನ ಆಸ್ಪತ್ರೆಗಳಿಂದ ಬಂದಿರುವ, ಇಬ್ಬರು ರೋಗಿಗಳ ಲಾಲಾರಸದ ಮಾದರಿಗಳಿದ್ದವು.

ಮತ್ತೆರಡು ನಿಮಿಷಗಳಲ್ಲಿ ಶೀ ಝೇಂಗ್ಲಿಯ ಮೊಬೈಲ್ ರಿಂಗಣಿಸಲಾರಂಭಿಸಿತ್ತು. ವಿಜ್ಞಾನ ಸಮ್ಮೇಳನವೊಂದರಲ್ಲಿ ಪಾಲ್ಗೊಳ್ಳಲು ಶಾಂಘೈಗೆ ಬಂದಿದ್ದ ಝೇಂಗ್ಲಿ ಇನ್ನೇನು ವೇದಿಕೆ ಏರಲು ಸಜ್ಜಾಗಿದ್ದಳು. ಬೇರೆ ಯಾರೇ ಕರೆ ಮಾಡಿದ್ದರೂ ಆ ಪರಿಸ್ಥಿತಿಯಲ್ಲಿ ರಿಸೀವ್ ಮಾಡುತ್ತಿರಲಿಲ್ಲವೇನೋ. ಆದರೆ ತಾನು ಕೆಲಸ ಮಾಡುತ್ತಿರುವ ಸಂಸ್ಥೆಯ ನಿರ್ದೇಶಕರೇ ಫೋನ್ ಮಾಡಿರುವುದನ್ನು ನೋಡಿ, ಏನೋ ಗಂಭೀರ ವಿಷಯವೇ ಇರುತ್ತದೆ ಎಂದು ಫೋನ್ ರಿಸೀವ್ ಮಾಡಿ ಮಾತಿಗಿಳಿದಳು.

ವುಹಾನ್‌ನ 'ರೋಗ ನಿಯಂತ್ರಣ ಮತ್ತು ಮುನ್ನೆಚ್ಚರಿಕಾ ಕೇಂದ್ರ' (Wuhan Center for Disease Control)ವು, ಇಬ್ಬರು ನ್ಯುಮೋನಿಯಾ ರೋಗಿಗಳ ಲಾಲಾರಸದಲ್ಲಿ ನೋವೆಲ್ ಕೊರೊನಾ ವೈರಸ್ ಅನ್ನು ಪತ್ತೆ ಹಚ್ಚಿದೆ. ನೀನು ಆ ಮಾದರಿಗಳನ್ನು ಇನ್ನೊಮ್ಮೆ ಪರೀಕ್ಷೆ ಮಾಡಬೇಕು ಎಂದು ಅವರ ಅಪೇಕ್ಷೆ. ಏನು ಮಾಡುವುದು?'

ಸಂಸ್ಥೆಯ ನಿರ್ದೇಶಕರು ರೋಗ ಲಕ್ಷಣಗಳು ಮತ್ತು ವೈರಸ್‌ಗೆ ಸಂಬಂಧಿಸಿದ ವಿವರಗಳನ್ನು ಹೇಳುತ್ತಿದ್ದಂತೆಯೇ ಝೇಂಗ್ಲಿ ಮುಖ ಬಿಳಿಚಿಕೊಳ್ಳಲಾರಂಭಿಸಿತು. ಮೈ ಕಂಪಿಸಲು ಶುರುವಾಯಿತು. ಮನಸ್ಸು ಹದಿನಾರು ವರ್ಷಗಳ ಹಿಂದೆ ಜಿಗಿದಿತ್ತು. 'ನನ್ನ ಊಹೆ ನಿಜವಾದರೆ... ಮನುಷ್ಯಕುಲಕ್ಕೇ ಮತ್ತೊಂದು ಕಂಟಕ ಬಂದಿದೆ ಎಂದೇ ಅರ್ಥ' ಎಂದು ಮನಸ್ಸಲ್ಲೇ ಅಂದುಕೊಂಡಳು. ವುಹಾನ್‌ನ 'ರೋಗ ನಿಯಂತ್ರಣ ಮತ್ತು ಮುನ್ನೆಚ್ಚರಿಕಾ ಕೇಂದ್ರ'ದ ಮಾತು ನಿಜವಾದರೆ, 2003–04ರ ಸಮಯದಲ್ಲಿ ಕಾಣಿಸಿಕೊಂಡು ಎಂಟು ಸಾವಿರಕ್ಕೂ ಅಧಿಕ ಜನರನ್ನು ಬಾಧಿಸಿ, ಎಂಟುನೂರಕ್ಕೂ ಅಧಿಕ ಜನರನ್ನು ಬಲಿತೆಗೆದುಕೊಂಡಿದ್ದ ಬಾವಲಿಜನ್ಯ 'ಸಾರ್ಸ್' (severe acute respiratory syndrome) ಕೊರೊನಾ ವೈರಸ್ ಕುಟುಂಬಕ್ಕೇ ಸೇರಿದ ವೈರಸ್ ಒಂದು ಮನುಷ್ಯನ ದೇಹವನ್ನು ಸದ್ದಿಲ್ಲದೇ ಸೇರಿಕೊಂಡಿದೆ!

'ಬೇರೆಲ್ಲ ಕೆಲಸ ಬಿಟ್ಟು ಆ ರೋಗಿಗಳ ಲಾಲಾರಸದ ಮಾದರಿಯನ್ನು ಮೊದಲು ಪರೀಕ್ಷಿಸಬೇಕು' – ಇಷ್ಟು ಮಾತ್ರ ಹೇಳಿದ ಝೇಂಗ್ಲಿ ಕರೆ ಕತ್ತರಿಸಿದ ಮರುಕ್ಷಣವೇ ಸಮ್ಮೇಳನದಿಂದ ಎದ್ದು ಹೊರಬಂದಳು. ಆ ಸಮಯದಲ್ಲಿ ಶಾಂಘೈನಿಂದ ವುಹಾನ್‌ಗೆ ಇದ್ದ ಮೊದಲ ರೈಲು ಏರಿ ವಾಪಸ್ ಬಂದಳು.

ರೈಲಿನಲ್ಲಿ ಕೂತಿದ್ದ ಝೇಂಗ್ಲಿ ಮನಸ್ಸು ಕಲ್ಲೆಸೆದ ಜೇನುಗೂಡೇ ಆಗಿತ್ತು. ಅದಕ್ಕೆ ಕಾರಣ ಹೊಸ ಬಗೆಯ ರೋಗಾಣು ಪತ್ತೆಯಾದ ಆತಂಕವಷ್ಟೇ ಆಗಿರಲಿಲ್ಲ. ಜಗತ್ತನ್ನೇ ಹೈರಾಣುಗೊಳಿಸಲಿರುವ ಈ ಮಹಾಮಾರಿಯ ಆಗಮನಕ್ಕೆ ನಾನೇ ಕಾರಣನಾದೆನೇ ಎಂಬ ಅಪರಾಧಿಪ್ರಜ್ಞೆಯೂ ಅವಳನ್ನು ಒಳಗೊಳಗೇ ಹಿಂಡಿ ಹಿಪ್ಪೆ ಮಾಡುತ್ತಿತ್ತು. 'ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ'ಯಲ್ಲಿ ನಾವೇ ಎಲ್ಲೆಲ್ಲಿಂದಲೋ ತಂದು ಸಂಶೋಧನೆಗಾಗಿ ಸಂಗ್ರಹಿಸಿ ಇಟ್ಟಿರುವ ಬಾವಲಿಜನ್ಯ ವೈರಸ್‌ಗಳಲ್ಲಿಯೇ ಯಾವುದಾದರೂ ಒಂದು ಲೀಕ್ ಆಗಿ ಈ ಅನಾಹುತಕ್ಕೆ ಕಾರಣವಾಗಿರಬಹುದೇ ಎಂಬ ಆಲೋಚನೆ ಮನಸ್ಸಲ್ಲಿ ಎದ್ದಿದ್ದೇ ವಾಯುವೇಗದಲ್ಲಿ ಓಡುತ್ತಿದ್ದ ರೈಲೂ ತೆವಳುತ್ತಿರುವ ಹಾಗೆ ಭಾಸವಾಯಿತು. ಎಷ್ಟು ಬೇಗ ವುಹಾನ್ ಸೇರುತ್ತೇನೋ ಎಂಬ ಚಡಪಡಿಕೆಯಲ್ಲಿ ಕೂತಲ್ಲಿ ಕೂಡಲಾಗದೆ ನಿಂತಲ್ಲಿ ನಿಲ್ಲಲಾಗದೆ ಒದ್ದಾಡಿದಳು. ಮನಸ್ಸು ಅಷ್ಟೇ ವೇಗದಲ್ಲಿ ಹಿಮ್ಮುಖವಾಗಿ ಚಲಿಸಲು ಶುರುವಾಗಿತ್ತು.

***

ಶೀ ಝೇಂಗ್ಲಿ ಹುಟ್ಟಿದ್ದು 1964ರಲ್ಲಿ. ಕ್ಸಿಕ್ಸಿಯಾ ಕೌಂಟಿಯ ಸಮೀಪದ ಹೆನಾನ್ ಎಂಬ ಊರಿನಲ್ಲಿ. 1987ರಲ್ಲಿ ವುಹಾನ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಆಕೆ, 1990ರಲ್ಲಿ 'ಚೀನಾ ವಿಜ್ಞಾನ ಅಕಾಡೆಮಿ'ಯ 'ವುಹಾನ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ'ಯಲ್ಲಿ ಸ್ನಾತಕೋತ್ತರ ಪದವಿ ಪಡೆದಳು. 2000ರಲ್ಲಿ ಫ್ರಾನ್ಸ್‌ನ ಮೌಂಟ್ ಪೆಲಿಯರ್ ಯೂನಿವರ್ಸಿಟಿಯಲ್ಲಿ ಪಿ.ಎಚ್‌ಡಿ. ಮಾಡಿದಳು.

'ವುಹಾನ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ' ಅವಳಿಗೆ ಒಂದು ರೀತಿಯಲ್ಲಿ ಮನೆಯಿದ್ದಂತೆ. ಅಲ್ಲಿಯೇ ಪದವಿ ಪಡೆದು, ನಂತರದ ಆಕೆಯ ಸಂಶೋಧನೆಯ ಸುಮಾರು ಎರಡು ದಶಕಗಳಿಗೆ ಸುರಕ್ಷಿತ ಗೂಡು ಒದಗಿಸಿದ್ದು ಅದೇ ಸಂಸ್ಥೆ.

ಝೇಂಗ್ಲಿಯನ್ನು ಸಹೋದ್ಯೋಗಿಗಳು ಕರೆಯುವುದು 'ಬಾವಲಿ ಹೆಣ್ಣು' (Bat woman) ಎಂದೇ! ಅದಕ್ಕೆ ಕಾರಣವೂ ಇದೆ. ಬರೋಬ್ಬರಿ ಹದಿನಾರು ವರ್ಷಗಳ ಕಾಲ ಅವಳು ಬಾವಲಿಜನ್ಯ ವೈರಸ್‌ಗಳ ಪತ್ತೆಕಾರ್ಯ ಮತ್ತು ಅವುಗಳ ಮೇಲೆ ಸಂಶೋಧನೆ ನಡೆಸುತ್ತ ಕಳೆದಿದ್ದಾಳೆ.

'ನನ್ನ ಸಂಶೋಧನೆಗಳ ಪ್ರಕಾರ ದಕ್ಷಿಣ ಚೀನಾದ ಗುವಾಂಗ್‌ಡಂಗ್, ಗುವಂಗ್‌ಕ್ಸಿ ಮತ್ತು ಯುನ್ನಾನ್ ಪ್ರದೇಶಗಳಲ್ಲಿನ ವಾತಾವರಣದಲ್ಲಿ ಬಾವಲಿಜನ್ಯ ಕೊರೊನಾ ವೈರಸ್‌ಗಳು ಮನುಷ್ಯದೇಹವನ್ನು ಪ್ರವೇಶಿಸುವ ಸಾಧ್ಯತೆ ಹೆಚ್ಚಿರುತ್ತದೆ. ಆದರೆ

